CW 2 PW 2

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ. ನಂ. 1482/2025**

| | | |
|---|---|---|
| ಸಾಕ್ಷಿದಾರರ ಹೆಸರು | – | ವಿದ್ಯಾಧರ |
| ತಂದೆಯ ಹೆಸರು | – | ಗ ು ರಿಯಾ ಮರಾಠಿ |
| ವಯಸ್ಸು | – | 39 ವರ್ಷ |
| ಉದ್ಯೋಗ | – | ಕ ೃಷಿ |
| ವಾಸ್ತವ್ಯ | – | ತಲಗ ೋಡ ಹೊನ್ನಾವರ |

(ಇಂದು ದಿನಾಂಕ 24-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನನಗೆ ಚಾ.ಸಾ.1ರವರ ಪರಿಚಯ ಇದೆ. ನಾನು ಮಣಿಪಾಲ ಆಸ್ಪತ್ರೆಗೆ ಹೋದಾಗ ಪೊಲೀಸರು ಒಂದು ದಾಖಲಾತಿಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದು ನಾನು ಸದರಿ ದಾಖಲಾತಿಗೆ ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಇರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿಗಳು ಕ್ರಮವಾಗಿ ಪಂಚನಾಮೆ ಹಾಗೂ ಕಚ್ಚಾ ನಕಾಶೆಯಾಗಿದ್ದು, ಅವುಗಳನ್ನು **ಕ್ರಮವಾಗಿ ನಿ.ಪಿ.2 ಹಾಗೂ ನಿ.ಪಿ.3 ಎಂದು** , ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು **ಕ್ರಮವಾಗಿ ನಿ.ಪಿ.2(ಎ) ಹಾಗೂ ನಿ.ಪಿ.3(ಎ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಫೋಟೊಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಸದ್ರಿ ಫೋಟೊಗಳನ್ನು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ನಿಪಿ.2 ಹಾಗೂ 3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸದ್ರಿ ಫೋಟೊಗಳನ್ನು ಏಲ್ಲಿ ಯಾವಾಗ, ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ಗ ೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ೀ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 20-04-2023 ರಂದು ಚಾಸಾ.24 ರವರು ನನ್ ಹಾಗೂ ಚಾ.ಸಾ.3 ರವರ ಸಮಕ್ಷಮದಲ್ಲಿ ಮಣಿಪಾಲ ಕಸ್ತೂರ ಬಾ ಆಸ್ಪತ್ರೆಯ ಮಣಿಪಾಲ ಔಟ ಪೋಸ್ಟ ಹತ್ತಿರ ಚಾಸಾ. 15 ರವರು ಹಾಜರುಪಡಿಸಿದ 1 ನೇ ಆರೋಪಿತನು ಘಟನೆಯ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತಾಗಿ 18.45 ರಿಂದ 19.30 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಮರಾಡಿರುತ್ತಾರೆ ಎಂರದೆ ಸರಿಯಲ್ಲ. ಸದರಿ ಸಂದರ್ಭದಲ್ಲ ನಿಪಿ.3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ನಿಪಿ.4 ರಂತೆ ಭಾವಚಚಿತ್ರವನ್ನು ತೆಗದಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಆರೋಪಿ ಪರ ಶ್ರೀ ಜಿ.ಸಿ.ಎನ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

CW 2 PW 2

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ**

ಪ್ರ.ದ.ನ್ಯಾದಂ. ಕುಮಟಾ